ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ**402/2013**

ದಿನಾಂಕ **13.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಡಿ.ಡಬ್ಲ್ಯೂ-1

<u>ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ಡಿ.ವಿ.ಎಸ್. ವಕೀಲರಿಂದಃ</u>

6. ಕನಕಾಪುರ ಜಮೀನನ್ನು ಯಾರು ಯಾರಿಗೆ ಮಾರಿದ್ದಾರೆ ಎಂದರೆ ಯಾವುದೇ ಜಮೀನನ್ನು ಯಾರಿಗೂ ಮಾರಿರುವುದಿಲ್ಲ. ಕನಕಾಪುರ ಗ್ರಾಮದ ಸ.ನಂ.132/1 ಶ್ರೀರಾಮುಲು ಹೆಸರಿನಲ್ಲಿ ಇದೆ. ನನ್ನ ತಕರಾರಿನಲ್ಲಿ ನಾನು ಹೇಳಿದ ವಿಲ್ ನ ಬಗ್ಗೆ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲೂ ಹೇಳಿದ್ದೇನೆ ವಿಲ್ ನ್ನು ತಿಮ್ಮರೆಡ್ಡಿ ಶ್ರೀನಿವಾಸ ಮತ್ತು ಶ್ರೀರಾಮುಲು ಹೆಸರಿಗೆ ನನ್ನ ತಂದೆ ತಾಯಿ ಮಾಡಿದ್ದಾರೆ. ಅದರಂತೆ ಕಂದಾಯ ದಾಖಲೆಗಳು ಬದಲಾಗಿವೆ. ಕಂದಾಯ ದಾಖಲೆಗಳು ಬದಲಾದ ನಂತರ ನನಗೆ ವಿಲ್ ಬಗ್ಗೆ ಗೊತ್ತಾಯಿತು. ವಿಲ್ ದಾಖಲೆಯಂತೆ ನನ್ನ ತಾಯಿ ಹೆಸರಿನಲ್ಲಿ ಇರುವ ಗೌಡೇಟಿ ಸ.ನಂ.47 ಮೂರು ಜನರ ಹೆಸರಿಗೆ ಬಂದಿದೆ. ನನ್ನ ತಂದೆ ಹೆಸರಿನಲ್ಲಿ ಇರುವ ಕನಕಾಪುರ ಗ್ರಾಮದ ಸ.ನಂ.27 ಶ್ರೀರಾಮುಲು ಹೆಸರಿಗೆ ಮಾತ್ರ ಕಂದಾಯ ದಾಖಲೆಗಳು ಬಂದಿವೆ

7. ಮೂಲ ವಿಲ್ ನಾನು ನನ್ನ ವಕೀಲರಿಗೆ ನೀಡಿದ್ದೇನೆ. ಸದರಿ ಮೂಲ ವಿಲ್ ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ವಿಲ್ ಯಾವ ವರ್ಷದಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ದಿ.04.02.2004 ರ ಪಂಚಾಯ್ತಿ ಪಾರಿಕತ್ತು ಆಗುವ ಮೊದಲೆ ವಿಲ್ ಆಗಿತ್ತು. ವಿಲ್ ಆದ ಸ್ವತ್ತುಗಳನ್ನು ಪಂಚಾಯ್ತಿ ಪಾರಿಕತ್ತಿನಲ್ಲಿ ತೋರಿಸಿರುವುದಿಲ್ಲ. ಪಂಚಾಯ್ತಿ ಪಾರಿಕತ್ತಿನಲ್ಲಿ ತಿಮ್ಮರೆಡ್ಡಿ, ಶ್ರೀನಿವಾಸ ಮತ್ತು ಶ್ರೀರಾಮುಲು ರವರಿಗೂ ಆಸ್ತಿ ಬಂದಿದೆ. ಪಂಚಾಯ್ತಿ ಪಾರಿಕತ್ತಿನಲ್ಲಿ ತೋರಿಸಿದ ಆಸ್ತಿಗಳು ಮತ್ತು ವಿಲ್ ನಲ್ಲಿ ತೋರಿಸಿರುವ ಆಸ್ತಿಗಳು ಬೇರೆ ಬೇರೆ.

8. ಪಂಚಾಯ್ತಿ ಪಾರಿಕತ್ತು ಆದ ನಂತರವೂ ದಾವಾ ಸ್ವತ್ತಿನ ಕಂದಾಯ ದಾಖಲೆಗಳು ತಿಮ್ಮರೆಡ್ಡಿ,ಶ್ರೀನಿವಾಸ ಮತ್ತು ಶ್ರೀರಾಮುಲು ರವರ ಜಂಟಿ ಹೆಸರಿನಲ್ಲಿ ಬರುತ್ತಿವೆ. ಪಂಚಾಯ್ತಿ ಪಾರಿಕತ್ತು ಪ್ರಕಾರ ನನಗೆ ಗೌಡೇಟಿ ಗ್ರಾಮದ ಸ.ನಂ.47 ಬಂದಿದೆ. ತಿಮ್ಮರೆಡ್ಡಿಗೂ ಅದೆ ಸ.ನಂ. ನಲ್ಲಿ ಆಸ್ತಿ ಬಂದಿದೆ. ಆದರೆ ಎಷ್ಟು ಬಂದಿದೆ ಎಂದು ಇನ್ನೂ ಅಳತೆ ಆಗಿರುವುದಿಲ್ಲ. ನಾವು ಈಗಲೂ ಸದರಿ ಆಸ್ತಿಯನ್ನು ಜಂಟಿಯಾಗಿ ಅನುಭವಿಸುತ್ತಿದ್ದೇವೆ. ಶ್ರೀರಾಮುಲು ರವರಿಗೆ ಗೌಡೇಟಿ ಸ.ನಂ.27 ರಲ್ಲಿ 9 ಎಕರೆ ಜಮೀನು ಬಂದಿದೆ.

9. ಹಿಂದೂಪುರದಲ್ಲಿ ಯಾರು ಜಮೀನು ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಹಿಂದೂಪುರದ ಆಸ್ತಿ ದಾವಾದಲ್ಲಿ ಸೇರಿಸಿರುವುದಿಲ್ಲ. ದಾವಾ ಸ್ವತ್ತುಗಳು ಈಗಲೂ ವಿಭಾಗ ಆಗಿಲ್ಲ ಎಂದರೆ ಈಗಾಗಲೆ ವಿಭಾಗ ಆಗಿವೆ. 6 ನೇ ಪ್ರತಿವಾದಿ /ರವಿಪ್ರಕಾಶ್ ರವರಿಗೆ ನಾವು ಮೂರು ಜನ ಗಂಡು ಮಕ್ಕಳು ಮತ್ತು ನನ್ನ ತಂದೆ ಎಲ್ಲರೂ ಸೇರಿ ಮಾರಾಟ ಮಾಡಿದ್ದೇವೆ. ನನ್ನ ತಂದೆ ಒಟ್ಟು ಕುಟುಂಬದ ಯಜಮಾನರಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಾನು ಸಾಕ್ಷಿಯಾಗಿ ಅದಕ್ಕೆ ಸಹಿ ಮಾಡಿದ್ದೇನೆ. ಸದರಿ ಕ್ರಯಪತ್ರಕ್ಕೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಗ ಹುಷಾರಿಲ್ಲದ ಕಾರಣ ನನ್ನ ತಂದೆ 6 ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡಿದ್ದಾರೆ. ಸದರಿ ಕ್ರಯಪತ್ರಕ್ಕೆ 1 ನೇ ವಾದಿ ಸಹ ಸಹಿ ಮಾಡಿದ್ದಾರಾ ಎಂದರೆ ಮಾಡಿಲ್ಲ, ಆದರೆ ಮರುದಿನ ಬೇರೆ ಪತ್ರಕ್ಕೆ ಸಹಿ ಮಾಡಿ ಕೊಟ್ಟಿದ್ದಾರೆ ಸದರಿ ಪತ್ರ 6 ನೇ ಪ್ರತಿವಾದಿಯ ಬಳಿ ಇದೆ.

10. ಕನಕಾಪುರ ಗ್ರಾಮದ ಸ.ನಂ.132 ವೆಂಕಟಲಕ್ಷ್ಮಮ್ಮ ನ ಹೆಸರಿನಲ್ಲಿ ಇದೆ. ವೆಂಕಟಲಕ್ಷ್ಮಮ್ಮನಿಗೆ ಯಾವಾಗ ಕ್ರಯ ಆಯಿತು ಎಂದು ನನಗೆ ಗೊತ್ತಿಲ್ಲ ಕ್ರಯಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ವೆಂಕಟಲಕ್ಷ್ಮಮ್ಮ ನ ಮದುವೆ ಆದ ನಂತರ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದಾರೆ ವಾದಿ ಹೇಳುತ್ತಾರೆ ಸದರಿ ಸ್ವತ್ತನ್ನು ವೆಂಕಟಲಕ್ಷ್ಮಮ್ಮ ಸ್ವತಃ ಖರೀದಿಸಿದ್ದಾರೆ ಎಂದರೆ ನನ್ನ ತಂದೆ ಕೊಡಿಸಿದ್ದಾರೆ ಎಂದು ನನ್ನ ತಂದೆ ಹೇಳಿರುತ್ತಾರೆ.

<u>ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.</u>

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ . ಹೇ. ಕೇ. ಸರಿ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ